# ಪಶು ಸಂಪತ್ತು ಆಮದು ಅಧಿನಿಯಮ, 1898

**(1898ರ ಅಧಿನಿಯಮ ಸಂಖ್ಯೆ 9)**

**[15ನೇ ಮಾರ್ಚ್ 1999ರ ಭಾರತ ರಾಜಪತ್ರದ IXನೇ ಭಾಗದ 1ನೇ ವಿಭಾಗದ 17ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 6ನೇ ಪುಟದಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

ಪ್ರಕರಣಗಳು :


1. ಚಿಕ್ಕ ಹೆಸರು ಮತ್ತು ಸ್ಥಳೀಯ ವ್ಯಾಪ್ತಿ
2. ಪರಿಭಾಷೆಗಳು
3. ಪಶು ಸಂಪತ್ತಿನ ಆಮದನ್ನು ನಿಯಂತ್ರಿಸುವ ಅಧಿಕಾರ
4. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ
5. ಅಧಿನಿಯಮದ ಮೇರೆಗೆ ಕಾರ್ಯ ನಿರ್ವಹಿಸುವ ವ್ಯಕ್ತಿಗಳಿಗೆ ಸಂರಕ್ಷಣೆ.

# ಪಶು ಸಂಪತ್ತು ಆಮದು ಅಧಿನಿಯಮ, 1898

(1898ರ ಅಧಿನಿಯಮ ಸಂಖ್ಯೆ 9)

[12ನೇ ಆಗಸ್ಟ್ 1898]

ಪಶು ಸಂಪತ್ತಿನ ಆಮದನ್ನು ನಿಯಂತ್ರಿಸುವುದಕ್ಕಾಗಿ ಉತ್ತಮ ವ್ಯವಸ್ಥೆಯನ್ನು ಮಾಡುವ ಅಧಿನಿಯಮ.

ಸೋಂಕುಗಳಿಗೆ ಅಥವಾ ಅಂಟು ಬೇನೆಗಳಿಗೆ ಗುರಿಯಾಗಬಹುದಾದ ಪಶುಸಂಪತ್ತಿನ ಆಮದನ್ನು ನಿಯಂತ್ರಿಸುವ ಸಂಬಂಧದಲ್ಲಿ ಉತ್ತಮ ವ್ಯವಸ್ಥೆಯನ್ನು ಮಾಡುವುದು ವಿಹಿತವಾಗಿರುವುದರಿಂದ, ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು :-

1. **ಚಿಕ್ಕಹೆಸರು ಮತ್ತು ಸ್ಥಳೀಯ ವ್ಯಾಪ್ತಿ.-** (1) ಈ ಅಧಿನಿಯಮವನ್ನು, ಪಶುಸಂಪತ್ತು ಆಮದು ಅಧಿನಿಯಮ, 1898 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ತದ್ವಿರುದ್ಧವಾಗಿ ಏನೇ ಇದ್ದ ಹೊರತು, -

(ಎ) "ಸೋಂಕುಗಳು ಅಥವಾ ಅಂಟು ಬೇನೆಗಳು" ಎಂಬ ಪದಾವಳಿಯು ಉಣ್ಣೆಪೀಡೆ, ನೆರಡಿ ರೋಗ, ಕುದುರೆ ಸಿಂಬಳ ರೋಗ, ರಸಗ್ರಂಥಿಗಳ ರೋಗ, ಕಜ್ಜಿ- ಇವುಗಳನ್ನು ಹಾಗೂ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ರೋಗವನ್ನು ಅಥವಾ ಬೇನೆಯನ್ನು ಒಳಗೊಳ್ಳುತ್ತದೆ; ಮತ್ತು

(ಬಿ) "ಪಶು ಸಂಪತ್ತು" ಎಂಬುದು, ಕುದುರೆಗಳನ್ನು, ಆಕಳನ್ನು, ಒಂಟೆಗಳನ್ನು, ಕುರಿಗಳನ್ನು ಮತ್ತು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಪಶುವನ್ನು ಒಳಗೊಳ್ಳುತ್ತದೆ;

(ಸಿ) "ಆಮದು" ಎಂದರೆ ಭಾರತದೊಳಕ್ಕೆ ಸಮುದ್ರ, ಭೂಮಿ ಅಥವಾ ವಾಯು ಮಾರ್ಗದ ಮೂಲಕ ತರುವುದು ಅಥವಾ ಅಲ್ಲಿಂದ ತೆಗೆದುಕೊಂಡು ಹೋಗುವುದು.

3. **ಪಶುಸಂಪತ್ತಿನ ಆಮದನ್ನು ನಿಯಂತ್ರಿಸುವ ಅಧಿಕಾರ.-** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ತಾನು ಸೂಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ ಭಾರತದೊಳಕ್ಕೆ ಅಥವಾ ಅದರಲ್ಲಿನ ಯಾವುದೇ ನಿರ್ದಿಷ್ಟ ಪ್ರದೇಶದೊಳಕ್ಕೆ, ಸೋಂಕುಗಳಿಗೆ ಅಥವಾ ಅಂಟು ಬೇನೆಗಳಿಗೆ ಗುರಿಯಾಗಬಹುದಾದಂಥ ಯಾವುದೇ ಪಶುಸಂಪತ್ತಿನ ಮತ್ತು ಪಶುಸಂಪತ್ತಿಗೆ ಸಂಬಂಧಿಸಿದ ಅಥವಾ ಅದರ ಸಂಪರ್ಕವನ್ನು ಹೊಂದಿರಬಹುದಾದ ಯಾವುದೇ ಮೇವಿನ, ಸಗಣಿಯ, ಲಾಯದ ಸೆತ್ತೆಯ, ಬಟ್ಟೆಬರೆಯ, ಸರಂಜಾಮಿನ ಅಥವಾ ಜೋಡಣೆಗಳ ಆಮದನ್ನು ನಿಯಂತ್ರಿಸಬಹುದು, ನಿರ್ಬಂಧಿಸಬಹುದು ಅಥವಾ ನಿಷೇಧಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯು, ಸಮುದ್ರ ಸೀಮಾ ಸುಂಕ ಅಧಿನಿಯಮ, 1878 (1878ರ 8)ರ 19ನೇ ಪ್ರಕರಣದ ಮೇರೆಗೆ ಹೊರಡಿಸಿದ್ದಿದ್ದರೆ ಹೇಗೋ ಹಾಗೆ ಪ್ರವರ್ತನೆಯಲ್ಲಿರತಕ್ಕದ್ದು ಮತ್ತು ಪ್ರತಿಯೊಂದು ಬಂದರಿನಲ್ಲಿನ ಸೀಮಾಸುಂಕದ ಅಧಿಕಾರಿಗಳು, ಯಾವ ಪಶು ಸಂಪತ್ತಿನ ಅಥವಾ ಯಾವ ವಸ್ತುವಿನ ಆಮದಿಗೆ ಸಂಬಂಧಿಸಿದಂತೆ ಅಂಥ ಅಧಿಸೂಚನೆಯನ್ನು ಹೊರಡಿಸಲಾಗಿದೆಯೋ ಆ ಪಶು ಸಂಪತ್ತಿಗೆ ಅಥವಾ ಆ ವಸ್ತುವಿಗೆ ಮತ್ತು ಅದನ್ನು ಒಳಗೊಂಡಿರುವ ನೌಕೆಗೆ ಸಂಬಂಧಪಟ್ಟಂತೆ, ಯಾವ ಸಾಮಗ್ರಿಯ ಆಮದನ್ನು ಸಮುದ್ರ ಸೀಮಾ ಸುಂಕಕ್ಕೆ ಸಂಬಂಧಪಟ್ಟ ಕಾನೂನಿನ ಮೂಲಕ ನಿಯಂತ್ರಿಸಲಾಗಿದೆಯೋ, ನಿರ್ಬಂಧಿಸಲಾಗಿದೆಯೋ ಅಥವಾ ನಿಷೇಧಿಸಲಾಗಿದೆಯೋ ಆ ಸಾಮಗ್ರಿಗೆ ಮತ್ತು ಅದನ್ನು ಒಳಗೊಂಡಿರುವ ನೌಕೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಅವರು ಹೊಂದಿರುವಂಥವೇ ಅಧಿಕಾರವನ್ನು ಹೊಂದಿರತಕ್ಕದ್ದು; ಮತ್ತು ಸಮುದ್ರ ಸೀಮಾ ಸುಂಕಗಳಿಗೆ ಅಥವಾ ಯಾವುದೇ

ಅಂಥ ಸಾಮಗ್ರಿಗೆ ಅಥವಾ ನೌಕೆಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಅಧಿನಿಯಮಿತಿಗಳು ತದನುಸಾರವಾಗಿ ಅನ್ವಯವಾಗತಕ್ಕುದು.

**4. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಆಮದು ಮಾಡಿಕೊಂಡ ಪಶುಸಂಪತ್ತನ್ನು ಮತ್ತು ಆಮದು ಮಾಡಿಕೊಂಡ ಪಶುಸಂಪತ್ತು ಅಥವಾ ಅದರೊಂದಿಗೆ ಸಂಪರ್ಕವನ್ನು ಹೊಂದಿರುವ ಮೇವನ್ನು, ಸಗಣಿಯನ್ನು, ಲಾಯದ ಸೆತ್ತೆಯನ್ನು, ಬಟ್ಟೆಬರೆಯನ್ನು, ಸರಂಜಾಮನ್ನು ಅಥವಾ ಜೋಡಣೆಗಳನ್ನು ತಡೆಹಿಡಿದಿಡುವುದು, ಅವುಗಳ ಪರಿಶೀಲನೆಗಾಗಿ, ಅವುಗಳ ಸೋಂಕು ನಿವಾರಣೆಗಾಗಿ ಅಥವಾ ನಾಶಕ್ಕಾಗಿ ಮತ್ತು ಈ ಬಗ್ಗೆ ಅದು ನೇಮಕ ಮಾಡಬಹುದಾದ ಅಧಿಕಾರಿಗಳ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿಯಂತ್ರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗಿನ ಯಾವುದೇ ನಿಯಮದ ಉಲ್ಲಂಘನೆಯು ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕುದೆಂದು ರಾಜ್ಯಸರ್ಕಾರವು ಅಂಥ ನಿಯಮವನ್ನು ರಚಿಸುವಾಗ ನಿರ್ದೇಶಿಸಬಹುದು.

**5. ಅಧಿನಿಯಮದ ಮೇರೆಗೆ ಕಾರ್ಯ ನಿರ್ವಹಿಸುವ ವ್ಯಕ್ತಿಗಳಿಗೆ ಸಂರಕ್ಷಣೆ.-** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

* * *